ಅಸಲು ದಾವಾ ನಂ.396/2018

ಡಿ ಡಬ್ಲ್ಯೂ: 1

(ಸಾಕ್ಷಿಯನ್ನು ಈ ದಿನ ದಿನಾಂಕ.03.08.2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.)

ಪಾಟೀ ಸವಾಲು ಃ ಶ್ರೀ ಎಮ್ ಸಿ ವಾಯ್ ವಕೀಲರಿಂದಃ

1. ನಾನು 4 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನನ್ನ ಅಜ್ಜನ ಹೆಸರು ಸೈದಪ್ಪ ಇರುತ್ತದೆ ಎಂದರೆ ಸರಿ. ಸೈದಪ್ಪನಿಗೆ 4 ಜನ ಗಂಡು ಮಕ್ಕಳು ಎಂದರೆ ಸರಿ. ಅವರೆಂದರೆ ಲಕ್ಷ್ಮಣ, ಪೀರಪ್ಪ, ಮಾದಪ್ಪ ಮತ್ತು ರಾಯಪ್ಪ ಎಂದು ಇರುತ್ತಾರೆ. ಅವರಲ್ಲಿ ಲಕ್ಷ್ಮಣ,ಪೀರಪ್ಪ ಮತ್ತು ಮಾದಪ್ಪ ಮೃತಪಟ್ಟಿರುತ್ತಾರೆ ಎಂದರೆ ಸರಿ. ಲಕ್ಷ್ಮಣ ಅವರು ಮದುವೆ ಆದ ನಂತರ ಪ್ರತ್ಯೇಕವಾಗಿ ಬಾಂಬೆಗೆ ಹೋಗಿದ್ದರು ಎಂದರೆ ಸರಿ. ಆತ ಬಾಂಬೆಗೆ ಹೋದ ನಂತರ ಪೀರಪ್ಪ, ಮಾದಪ್ಪ ಮತ್ತು ರಾಯಪ್ಪ ಒಟ್ಟಾಗಿ ಇದ್ದರು ಎಂದರೆ ಸರಿಯಲ್ಲ. ಸದರಿಯವರು ಪ್ರತ್ಯೇಕವಾಗಿದ್ದರು ಎಂದು ಯಾವ ಆಧಾರದ ಮೇಲೆ ಹೇಳುತ್ತೀರಾ ಎಂದರೆ ಸಾಕ್ಷಿ ನನ್ನ ತಂದೆ ಹೇಳಿದ್ದು ಇರುತ್ತದೆ ಯಾವ ದಾಖಲಾತಿ ಇಲ್ಲ ಎಂದರೆ ಸರಿ.

2. ಪೀರಪ್ಪ, ಮಾದಪ್ಪ ಮತ್ತು ರಾಯಪ್ಪ ಒಟ್ಟಾಗಿ ದುಡಿಮೆ ಮಾಡಿ ಆಲಮೇಲದಲ್ಲಿ ಸರ್ವೇ ನಂಬರ 717 ಒಟ್ಟು 9 ಎಕರೆ 37 ಗುಂಟೆ ಜಮೀನು ಖರೀದಿ ಮಾಡಿದ್ದರು ಎಂದರೆ ಸಾಕ್ಷಿ ಇಲ್ಲ ಪೀರಪ್ಪ ಮಾತ್ರ ಖರೀದಿ ಮಾಡಿದ್ದರು ಎಂದು ನುಡಿದಿರುತ್ತಾರೆ. ಜಮೀನಿನ ಉಸ್ತುವಾರಿ ನನ್ನ ತಂದೆಯಾದ ಪೀರಪ್ಪ ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿ ಇಲ್ಲ ಪ್ರತ್ಯೇಕವಾಗಿ ನೋಡಿಕೊಳ್ಳುತ್ತಿದ್ದರು ಎಂದು ನುಡಿದಿರುತ್ತಾರೆ. ನನ್ನ ತಂದೆಯೇ ಜಮೀನಿನ ಉಸ್ತುವಾರಿ ಮಾಡುತ್ತಿದ್ದ ಕಾರಣ 3 ಜನ ಸೇರಿ ಅವರ ಹೆಸರಿನಲ್ಲಿಯೇ ಜಮೀನನ್ನು ಖರೀದಿ ಮಾಡಿದ್ದರು ಎಂದರೆ ಸಾಕ್ಷಿ ಪೀರಪ್ಪರವರೇ ಖರೀದಿ ಮಾಡಿದ್ದರು

ಎಂದು ನುಡಿದಿರುತ್ತಾರೆ. ಸಾಕ್ಷಿಗೆ ಪೀರಪ್ಪ ಮಾದಪ್ಪ ಹಾಗೂ ರಾಯಪ್ಪ ಅವರು ತಮ್ಮಲ್ಲಿ ಪಾಲು ಮಾಡಿಕೊಂಡಿದ್ದರಾ ಎಂದರೆ ಸಾಕ್ಷಿ ಮೊದಲೇ ಬೇರೆಯಾಗಿದ್ದರು ಎಂದು ನುಡಿದಿರುತ್ತಾರೆ. ಸದರಿಯವರು ಪ್ರತ್ಯೇಕವಾಗಿರಲಿಲ್ಲ ಒಟ್ಟಾಗಿ ಪೀರಪ್ಪ ಅವರ ಹೆಸರಿನಲ್ಲಿ ಸರ್ವೆ ನಂಬರ 717 ನ್ನು ಖರೀದಿ ಮಡಿದ್ದರು ಎಂದರೆ ಸರಿಯಲ್ಲ.

3. ಸರ್ವೆ ನಂಬರ 717 ಮೂಲತ ಮಲ್ಲಪ್ಪ ಶರಣಪ್ಪ ಕೋಟೆಯವರಿಗೆ ಸೇರಿದ್ದು ಎಂದರೆ ಸರಿ. ಸದರಿ ಜಮೀನನ್ನು ದಿ 11-06-1959 ರಲ್ಲಿ ನನ್ನ ತಂದೆ ಮಾದಪ್ಪ ರಾಯಪ್ಪ ಒಟ್ಟಾಗಿ ದುಡಿಮೆ ಮಾಡಿ ಬಂದ ಆದಾಯದಿಂದ 800 ರೂಪಾಯಿಗೆ ಸದರಿ ಜಮೀನನ್ನು ನನ್ನ ತಂದೆಯ ಹೆಸರಿನಲ್ಲಿ ಖರೀದಿ ಮಾಡಿದ್ದರೂ ಎಂದರೆ ಸಾಕ್ಷಿ ನನ್ನ ತಂದೆಯೇ ಖರೀದಿ ಮಾಡಿದ್ದರು ಎಂದು ನುಡಿದಿರುತ್ತಾರೆ. ಅದರಂತೆ 1960-60 ರಿಂದ 3 ಜನರ ಹೆಸರು ಪಹಣಿ ಪತ್ರಿಕೆಯಲ್ಲಿ ಬಂದಿರುತ್ತದೆ ಎಂದರೆ ಸರಿಯಲ್ಲ.

4. ಸಾಕ್ಷಿಗೆ ನಿಪಿ 8 ನ್ನು ತೋರಿಸಿ ಅದರಲ್ಲಿ 1960-61 ಕ್ಕೆ ಸಂಬಂಧಿಸಿದಂತೆ ಮಾದಪ್ಪ, ರಾಯಪ್ಪ ಮತ್ತು ಪೀರಪ್ಪ ಅವರ ಹೆಸರು ನಮೂದು ಇರುತ್ತವೆ ಎಂದರೆ ಸಾಕ್ಷಿಗೆ ಸದರಿ ದಾಖಲಾತಿಯಲ್ಲಿನ ಹೆಸರುಗಳನ್ನು ಓದಿ ಹೇಳಲಾಗಿ ಮತ್ತು ತೋರಿಸಲಾಗಿ ಯಾವುದೇ ಉತ್ತರ ನೀಡಿರುವುದಿಲ್ಲ. ಅದೇ ರೀತಿ ನಿಪಿ 8 ರಲ್ಲಿ ಪೀರಪ್ಪ, ರಾಯಪ್ಪ ಮತ್ತು ಮಾದಪ್ಪ ಅವರ ಹೆಸರಿಗೆ 3 ಎಕರೆ 16 ಗುಂಟೆ ಜಮೀನುಗಳನ್ನು ತಲಾ ನಮೂದಿಸಲಾಗಿದೆ ಎಂದರೆ ಸರಿ. 1961-62, 1963-64 ಅದೇ ರೀತಿ ಮುಂದುವರೆದಿರುತ್ತದೆ ಎಂದರೆ ಸರಿಯಲ್ಲ.

ಮತ್ತೊಂದು ಬಾರಿ ದಾಖಲಾತಿ ತೋರಿಸಿ ಕೇಳಲಾಗಿ ನೋಡಿ ಸರಿ ಇರುತ್ತದೆ ಎಂದು ನುಡಿಯತ್ತಾರೆ.

5. ನನ್ನ ತಂದೆ ಪೀರಪ್ಪ 2016 ರಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ನನ್ನ ತಂದೆ ತೀರಿಕೊಂಡ ನಂತರ ಸರ್ವೆ ನಂಬರ 717 ಕ್ಕೆ ಸಂಬಂದಿಸಿದಂತೆ 9 ಎಕರೆ 37 ಗುಂಟೆ ಜಮೀನಿಗೆ ಪೀರಪ್ಪ ಅವರ ವಾರಸುದಾರರಾದ ಪ್ರತಿವಾದಿ 1 ರಿಂದ 7 ರವರು ನಮ್ಮ ಹೆಸರುಗಳನ್ನು ನಮೂದಿಸಿಕೊಂಡಿರುತ್ತೇವೆ ಎಂದರೆ ಸಾಕ್ಷಿ ನನ್ನ ತಂದೆ ಜೀವಂತ ಇದ್ದಾಗಲೇ ಆಸ್ತಿ ಬಿಟ್ಟುಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ಯಾರ ಹೆಸರನಲ್ಲಿ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಮಾದಪ್ಪ ಅವರ ಹೆಸರಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ತಮ್ಮ ತಂದೆ ತಮ್ಮ ಚಿಕ್ಕಪ್ಪನಾದ ಮಾದಪ್ಪ ಅವರ ಹೆಸರಿಗೆ ಜಮೀನು ಬಿಟ್ಟುಕೊಟ್ಟಿರುವ ಬಗ್ಗೆ ದಾಖಲಾತಿಗಳನ್ನು ಹಾಜರು ಮಾಡಿರುತ್ತಿರಾ ಎಂದರೆ ಸಾಕ್ಷಿ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ.

**ಮುಂದುವರೆದ ಪಾಟೀ ಸವಾಲಿಗಾಗಿ ಕಾಲವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದುಡಲಾಯಿತು.**

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ನ್ಯಾಯಾಧೀಶರು ವ

ಜೆ ಎಂ ಎಫ್ ಸಿ, ಸಿಂದಗಿ.